VIJAYAKUMAR KANNUR Digitally signed by VIJAYAKUMAR KANNUR Date: 2026.03.18 10:43:17 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 17.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ದಿಃ 07.03.2026 ರಂದು ದಂಡ ಪ್ರಕ್ರಿಯಾ ಸಂಹಿತೆ ಕಲಂ 311 ಹಾಗೂ 91(2) ರ ಅಡಿಯ ಅರ್ಜಿಯ ಮೇಲಿನ ಆದೇಶದ ಮೇರೆಗೆ ಸಾಕ್ಷಿಯನ್ನುಪುನಃ ಕರೆಸಲಾಯಿತು ಮುಖ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.

**ಮುಖ್ಯ ವಿಚಾರಣೆ: ದೂರುದಾರ ಪರ ಶ್ರೀ ವಾಯ್ ಎಂ ಹೆಚ್ ವಕೀಲರಿಂದ**

1. 12 ಪಹಣಿ ಪತ್ರಿಕೆಗಳನ್ನು ಕ್ರಮವಾಗಿ **ನಿಪಿ 7 ರಿಂದ 18** ಎಂದು ಗುರುತಿಸಲಾಯಿತು.
2. ವಿಜಯ ಸೌಹಾರ್ದ ಕ್ರೆಡೀಟ್ ಸಹಕಾರಿ ಸಂಘ ಮುಧೋಳ ಇವರು 01.04.2023 ರಿಂದ 28.01.2026 ರ ಅವಧಿಯವರೆಗೆ ನೀಡಿರುವ ಸ್ಟೆಟಮೆಂಟ್ ನ್ನು **ನಿಪಿ 19** ಎಂದು ಗುರುತಿಸಲಾಯಿತು.
3. ಸ್ಟೆಟ ಬ್ಯಾಂಕ್ ಆಫ್ ಇಂಡಿಯಾ ಮುಧೋಳ ಇವರು ನೀಡಿರುವ 08.07.2024 ರಿಂದ 09.07.2024 ರವರೆಗಿನ ಸ್ಟೆಟಮೆಂಟ್ ನ್ನು **ನಿಪಿ 20** ಎಂದು ಗುರುತಿಸಲಾಯಿತು.
4. ಸ್ಟೆಟ ಬ್ಯಾಂಕ್ ಆಫ್ ಇಂಡಿಯಾ ಮುಧೋಳ ಇವರು ನೀಡಿರುವ 04.03.2024 ರಿಂದ 06.03.2024 ರವರೆಗಿನ ಸ್ಟೆಟಮೆಂಟ್ ನ್ನು **ನಿಪಿ 21** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ HRT ವಕೀಲರಿಂದ :**

ನಾನು ಹಾಜರು ಪಡಿಸಿರುವ ಪಹಣಿ ಪತ್ರಿಕೆಯ ಜಮೀನುಗಳು ನನಗೆ ವಾಟ್ನಿ ಮುಖಾಂತರ ಬಂದಿರುವವು. ನನ್ನ ಹೆಸರಿನಲ್ಲಿ ಇರುವ ಜಮೀನುಗಳ ಸರ್ವೇ ನಂಬರ್ 67, 66, 65. ಈ ಜಮೀನುಗಳ ಹಲಗಲಿ ಗ್ರಾಮದ ಜಮೀನುಗಳಾಗಿರುವವು. ಈ ಮೇಲೆ ಹೇಳಿದ ಸರ್ವೇ ನಂಬರ್ ನ ಜಮೀನುಗಳು ನನಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಬ್ಯಾಂಕ್ ಸ್ಟೆಟಮೆಂಟ್ ನ ದಾಖಲೆಗಳಲ್ಲಿ ಈ ದೂರಿನಲ್ಲಿ

ಹೇಳಿರುವ ದಿನಾಂಕದಂದು ರೂ. 10 ಲಕ್ಷ ತೆಗೆದ ಬಗ್ಗೆ ಯಾವುದೇ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ರೂ. 10 ಲಕ್ಷ ಹಣ ದೊಡ್ಡ ಮೊತ್ತವಾಗಿರುವುದರಿಂದ ಆ ಹಣವನ್ನು ಬ್ಯಾಂಕ್ ವ್ಯವಹಾರದ ಮೂಲಕವೇ ನೀಡಬೇಕು ಎಂದು ನನಗೆ ಮಾಹಿತಿ ಇರುವುದು ಎಂದರೆ ಸರಿಯಲ್ಲ.

2. ಆರೋಪಿಯ ಬ್ಯಾಂಕ್ ಖಾತೆಗೆ ನನ್ನ ಸಹೋದರನಾದ ವಿಠಲನ ಬ್ಯಾಂಕ್ ಖಾತೆಯ ಮುಖಾಂತರ ರೂ. 50 ಸಾವಿರ ದಂತೆ ಎರಡು ಬಾರಿ ಒಟ್ಟುರೂ. 1 ಲಕ್ಷ ಹಣವನ್ನು ಫೋನ್ ಪೇ ಮೂಲಕ ವರ್ಗಾವಣೆ ಮಾಡಿರುವೆನು. ಯಾವ ದಿನಾಂಕದಂದು ಈ ಹಣ ವರ್ಗಾವಣೆ ಮಾಡಿದ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳ ಪ್ರಕಾರ ಆರೋಪಿಗೆ ರೂ. 10 ಲಕ್ಷ ನೀಡಿದ ಬಗಗೆ ಯಾವುದೇ ಉಲ್ಲೇಖ ಇರುವುದಿಲ್ಲ ಹಾಗೂ ಈ ದಾಖಲೆಗಳು ಈ ಪ್ರಕರಣಕ್ಕೆ ಅನುಕೂಲವಾಗುವ ಹಾಗೆ ಸೃಷ್ಟಿ ಮಾಡಿಕೊಂಡು ಬಂದು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ಮಧ್ಯೆ ಈ ದೂರಿನಲ್ಲಿ ಹೇಳಿರುವಂತೆ ಯಾವುದೇ ಹಣಕಾಸಿನ ವ್ಯವಹಾರವಾಗಿರುವುದಿಲ್ಲ, ಆದರೂ ಸಹ ನಾನು ಸುಳ್ಳು ದೂರು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ